


International Journal of Kannada Research
www.kannadajournal.com

**ISSN: 2454–5813**
IJKR 2017; 3(4): 86-90
© 2017 IJKR
www.kannadajournal.com
Received: 16-08-2017
Accepted: 17-09-2017

**ಪರಮೇಶ್ ಡಿ. ಜೋಳದ**
ಸಾಂಸ್ಕೃತಿಕಅಧ್ಯಯನ ಮತ್ತು
ಸಂಶೋಧನಾ ವಿಭಾಗ.
ಮಾನವೀಯ ಶಾಸ್ತ್ರ ಮತ್ತು
ಸಾಮಾಜಿಕ ವಿಜ್ಞಾನ ನಿಕಾಯ,
ಜೈನ್ ವಿಶ್ವವಿದ್ಯಾಲಯ
ಬೆಂಗಳೂರು.

**ಡಾ. ಸೌಮ್ಯ ಮಂಜುನಾಥ್ ಚವಾಣ್**
ಸಾಂಸ್ಕೃತಿಕಅಧ್ಯಯನ ಮತ್ತು
ಸಂಶೋಧನಾ ವಿಭಾಗ.
ಮಾನವೀಯ ಶಾಸ್ತ್ರ ಮತ್ತು
ಸಾಮಾಜಿಕ ವಿಜ್ಞಾನ ನಿಕಾಯ,
ಜೈನ್ ವಿಶ್ವವಿದ್ಯಾಲಯ
ಬೆಂಗಳೂರು.

# ಕರ್ನಾಟಕ ಸಾಂಪ್ರದಾಯಿಕಕಲೆಯಲ್ಲಿ ರೇಖೆಗಳ ಪ್ರಾಮುಖ್ಯತೆ’ ರಾಮ ಪಟ್ಟಾಭಿಶೇಕ ಚಿತ್ರದ ಒಂದು ಅಧ್ಯಯನ

**ಪರಮೇಶ್ ಡಿ. ಜೋಳದ ಡಾ. ಸೌಮ್ಯ ಮಂಜುನಾಥ್ ಚವಾಣ್**

**ಸಾರಾಂಶ:** ಭಾರತದ ಸಾಂಪ್ರದಾಯಿಕ ಚಿತ್ರಕಲೆಯ ಇತಿಹಾಸಕ್ಕೆ ಕರ್ನಾಟಕದ ಕಡುಗೆಯೂ ಅಮೋಘವಾದುದು. ನಮ್ಮ ಭಾರತದುದ್ದಕ್ಕೂ ಹಬ್ಬಿದ್ದ ಪ್ರತಿಯೊಂದು ಸಾಂಪ್ರದಾಯಿಕ ಚಿತ್ರಕಲಾ ಶೈಲಿಗಳು ತನ್ನದೇ ಆದ ವೈಶಿಷ್ಟ್ಯಗಳಿಂದ ಶ್ರೀಮಂತವಾಗಿದ್ದು, ‘ರೇಖೆ’ ಮಾತ್ರ ಎಲ್ಲ ಶೈಲಿಗಳಲ್ಲಿ ಪಾಧಾನ ಧಾತುವಾಗಿದುದ್ದಲ್ಲದೇ ಅವಶ್ಯವೂ ಆಗಿರುವುದು ಕಂಡುಬರುತ್ತದೆ. ಈ ಕಾರಣದಿಂದಾಗಿ ಕೆಲವೊಮ್ಮೆ ಅದರಲ್ಲಡಗಿದ ಮರ್ಮವನ್ನು ಅರಿಯುವ ಇಚ್ಛೆಗಳು ಬಲಗೊಂಡು ಆಳವಾದ ಅಧ್ಯಯನಾನುಪಾತಕ್ಕೀಡು ಮಾಡುತ್ತವೆ. ಇಲ್ಲಿ ಸಂಶೋಧಕನಿಗೆ ಮೇಲೆ ವಿವರಿಸಿದ ಅಭಿಪ್ರಾಯಗಳ ಅನುಭವದಿಂದಾಗಿ, ಪ್ರಸ್ತುತ ವಿಷಯದ ಅಧ್ಯಯನಾಯ್ಕೆಗೆ ಕಾರಣವಾಗಿದೆ. ರೇಖೆಗಳಲ್ಲಿರುವ ಅಭಿವ್ಯಕ್ತಿ ಗುಣಗಳು ಈ ಸಾಂಪ್ರದಾಯಿಕ ಕಲೆಯಲ್ಲಿ ಮೂಡಿಸಬಲ್ಲ ಸಾಧ್ಯತೆಗಳನ್ನು ನಿಜಕ್ಕೂ ಅರ್ಥಮಾಡಿಕೊಳ್ಳುವ ಪ್ರಯತ್ನವೂ ಇದಾಗಿದೆ.

**ಪ್ರಮುಖ ಸೂಚಿಕೆ ಪದಗಳು:** ರೇಖೆ, ಅದರ ಗುಣಧರ್ಮ, ಕಲಾವಿದನ ನೈಪುಣ್ಯತೆ, ಅದರ ಅವಶ್ಯಕತೆ ಮತ್ತು ಪರಿಣಾಮ.
ರೇಖೆಗೆ ತನ್ನದೇ ಆದ ಗುಣಧರ್ಮ ಇದ್ದು, ಸಂದರ್ಭಾನುಸಾರವಾಗಿ ಅದರ ಗುಣಲಕ್ಷಣಗಳನ್ನು ಬದಲಾಯಿಸಿಕೊಳ್ಳುವ ಸಾಮರ್ಥ್ಯವುಳ್ಳದ್ದಾಗಿದೆ. ರೇಖೆಯಲ್ಲಿರುವ ಇಂತಹ ಸಾಮರ್ಥ್ಯವನ್ನು ಅರಿತು ಅದನ್ನು ದೃಢಪಡಿಸಿಕೊಳ್ಳಲು ನೈಪುಣ್ಯತೆ ಹೊಂದಿದ ಕಲಾವಿದನ ಅವಶ್ಯಕತೆ ಅತಿ ಅವಶ್ಯ. ಈ ಎರಡರ ಸಮ್ಮಿಲನ ದಿಂದ ಚಿತ್ರರಚನೆಯಲ್ಲಾಗುವ ಪರಿಣಾಮ ಅತೀತ. ಇಂತಹ ಅನುಭವವನ್ನು ನಾವು ಸಾಂಪ್ರದಾಯಿಕ ಕಲೆಯಲ್ಲಿ ಬಳಸಿದ ರೇಖೆಗಳಿಂದ ಪಡೆಯಬಹುದು.

**ಪೀಠಿಕೆ:** ಭಾರತೀಯ ಚಿತ್ರಕಲಾ ಪರಂಪರೆ ಅದರಲ್ಲೂ ಕರ್ನಾಟಕದ ಭಿತ್ತಿಚಿತ್ರ ಹಾಗೂ ಸಾಂಪ್ರದಾಯಿಕ ಚಿತ್ರಕಲೆಯು ಈ ನಾಡಿನ ಸಾಂಸ್ಕೃತಿಕ ಬೆಳವಣಿಗೆಗಳಿಗೆ ತನ್ನದೇ ಆದ ಕೊಡುಗೆಗಳನ್ನ ನೀಡಿದೆ. ಕರ್ನಾಟಕದ ಸಾಂಪ್ರದಾಯಿಕ ಶೈಲಿಯ ಕಲಾಕೃತಿಗಳು ನಿರೂಪಣಾತ್ಮಕ ಗುಣಗಳಿಂದ ಕೂಡಿದ್ದು. ಧಾರ್ಮಿಕ ಹಾಗೂ ಪೌರಾಣಿಕ ವಿಷಯಾಧಾರಿತ ಜೀವಂತ ಚಿತ್ರಮಾಲಿಕೆಗಳಾಗಿವೆ. ಇಂಥ ಅಭುತ್ಪೂರ್ವ ಚಿತ್ರ ರಚನೆಯಲ್ಲಿ ಆಗಿನ ಕಲಾವಿದರ ನೈಪುಣ್ಯತೆಯ ಜೊತೆ ಅವರು ಚಿತ್ರರಚನೆಯಲ್ಲಿ ಬಳಸಿದ ತಂತ್ರಗಾರಿಕೆಯೂ ಅಷ್ಟೆ ಪ್ರಾಮುಖ್ಯತೆಯನ್ನು ಹೊಂದಿದೆ. ಈ ತಂತ್ರಗಾರಿಕೆಯಲ್ಲಿ ಬಳಸಿದ ಚಿತ್ರಕಲೆಯ ಮೂಲ ಧಾತುಗಳಲ್ಲೊಂದಾದ ‘ರೇಖೆ’ ಯನ್ನು ಅವರು ಬಳಸಿದ ಪರಿ ಮತ್ತು ಅದರ ಪ್ರಾಮುಖ್ಯತೆಯನ್ನು ಅಧ್ಯಯನಕ್ಕಾಗಿ ಆಯ್ದು ಕೊಂಡ ರಾಮ ಪಟ್ಟಾಭಿಶೇಕ ಚಿತ್ರಪಟದ ಮೂಲಕ ಗುರುತಿಸುವ ಪ್ರಯತ್ನ ಈ ಪ್ರಬಂಧದ್ದಾಗಿದೆ.

**ವಿಷಯ ವಿಸ್ತರಣೆ:** ಪ್ರಕೃತಿಯ ಕೊಡುಗೆಯಾದ ಮಾನವ ತನ್ನ ಪ್ರತಿಕೃತಿಯನ್ನೇ ನಿರ್ಮಿಸುವಷ್ಟು ಎತ್ತರಕ್ಕೆ ಬೆಳೆದು ನಿಂತ ಸಾಹಸದಲ್ಲಿ ‘ರೇಖೆ’ಯ ಪಾತ್ರವನ್ನು ಅಲ್ಲಗಳೆಯುವಂತಿಲ್ಲ. ಇದೇ ರೇಖೆಯಿಂದ ತನ್ನ ಕಲಾಜಗತ್ತನ್ನು ಕೂಡಾ ಶ್ರೀಮಂತಗೊಳಿಸಿಕೊಂಡು ಆನಂದಿಸಿದ್ದಾನೆ. ಇದು ಅವನು ಆದಿಮಾನವನಾಗಿದ್ದಾಗಿನ ಕಾಲದಿಂದಲೂ ನಡೆದು ಬಂದಿದೆ. ಕಲೆಯ ಪ್ರಾಚೀನ ಕಾಲದಿಂದಲೂ ಮಾನವನ ಸಂಗಾತಿ. ಇದಕ್ಕೆ ಪೂರಕವಾಗಿ ಜಗತ್ತಿನಾದ್ಯಾಂತ ಅನೇಕ ಕುರುಹುಗಳು ಸಾಕ್ಷಿಯಾಗಿದ್ದಾವೆ. ಭಾರತದ ಅತ್ಯಂತ ಪ್ರಾಚೀನ ಚಿತ್ರಭಂಡಾರವು ಅಜಂತಾ, ಬಾಗ್ ಹಾಗೂ ಬದಾಮಿಗುಹೆಗಳಲ್ಲಿ ಇರುವಂಥವುಗಳು ಎಂದು ಸಾಮಾನ್ಯ ಅಭಿಪ್ರಾಯ ಅದಕ್ಕಿಂತ ’ಹಿಂದಿನ ಕಾಲದ ಕೃತಿಗಳು

**Correspondence**
**ಪರಮೇಶ್ ಡಿ.**
ಸಾಂಸ್ಕೃತಿಕಅಧ್ಯಯನ ಮತ್ತು
ಸಂಶೋಧನಾ ವಿಭಾಗ.
ಮಾನವೀಯ ಶಾಸ್ತ್ರ ಮತ್ತು
ಸಾಮಾಜಿಕ ವಿಜ್ಞಾನ ನಿಕಾಯ,
ಜೈನ್ ವಿಶ್ವವಿದ್ಯಾಲಯ
ಬೆಂಗಳೂರು.

ದೊರೆಯುವುದಿಲ್ಲ. ಆದರೆ ಆಗ ಕೂಡಾ ಚಿತ್ರಕಲಾ ಸಂಪ್ರದಾಯವಿದ್ದುದು ಅನೇಕ ಉಲ್ಲೇಖಗಳಿಂದ ನಮಗೆ ತಿಳಿದು ಬರುತ್ತದೆ. ಅಜಂತೆಯ ವೇಳೆಗೆ ಅಷ್ಟು ಪರಿಪಕ್ವ, ಉತ್ತಮ ಚಿತ್ರರಚನೆಗಳಾಗಬೇಕಾದರೆ ಅದಕ್ಕಿಂತಲೂ ಮುಂಚೆ ಸಾಕಷ್ಟು ಚಿತ್ರವ್ಯವಸಾಯ ನಡೆದಿರಬೇಕು. ಭಾರತದ ಕೆಲವು ಗವಿಗಳಲ್ಲಿ ಇತಿಹಾಸ ಪೂರ್ವದ ಜನ್ಮದ ಕಲಾಚಟುವಟಿಕೆಯ ಕುರುಹುಗಳು ದೊರೆತಿವೆ. ಭಾರತದಲ್ಲಿ ಅವು ಅತ್ಯಂತ ಪ್ರಾಚೀನವಾದ ಚಿತ್ರಗಳು ಆಗ ಲೋಹಗಳು ಕಂಡು ಹಿಡಿಯಲ್ಪಟ್ಟಿರಲಿಲ್ಲ. ಮಾನವನು ಕಲ್ಲಿನ ಆಯುಧಗಳನ್ನು ಚಲಿಸುತ್ತಿದ್ದನು. ಅಂತಹ ಆದಿಮಾನವನಿಂದ ನಿರ್ಮಿತವಾದ ಕೃತಿಗಳವು[1] ಮತ್ತು ಪ್ರಾಚೀನ ಗ್ರಂಥಗಳಲ್ಲಿ ಚಿತ್ರಕಲೆ ಚಿತ್ರ ತಂತ್ರಗಳ ಬಗ್ಗೆ ಮಾಹಿತಿಯಿರುವುದನ್ನು ನಾವು ಕಾಣಬಹುದಾಗಿದೆ. ಇಂದು ನಮಗೆ ದೊರೆತಿರುವ ಅತ್ಯಂತ ಪ್ರಾಚೀನ ಗ್ರಂಥವೆಂದರೆ ವಿಷ್ಣುಧರ್ಮೋತ್ತರದ ಚಿತ್ರಸೂತ್ರ. ದಾಮೋದರಗುಪ್ತನು ತನ್ನ ಕುಟ್ಟನೀ ಮತದಲ್ಲಿ ಕಲಾಭಿಜ್ಞರು (ಕಲೆ ಬಗ್ಗೆ ಚೆನ್ನಾಗಿ ತಿಳಿದವರು) ಕಲೆಯ ಪ್ರಮಾಣ ಗ್ರಂಥವೆಂದು ಅಭ್ಯಸಿಸುವ ಗ್ರಂಥವೆಂದು ಸೂಚಿಸಿರುವುದು ಬಹುಶಃ ಇದೇ ಆಗಿರಬೇಕು. ಪ್ರಸ್ತುತ ಚಿತ್ರಸೂತ್ರದಲ್ಲಿ ಚಿತ್ರಗಳ ವರ್ಗೀಕರಣ, ಚಿತ್ರಕಲೆಯ ಸಾಮಗ್ರಿಗಳು, ವರ್ಣಚಿತ್ರದ ಗುಣದೋಷಗಳು ಹಾಗೂ ಚಿತ್ರಕಲಾವಿದರಿಗೆ ಉಪಯುಕ್ತವಾದ ಕಾರ್ಯೋದ್ಯುಕ್ತ ಸೂಚನೆಗಳಂತಹ ಅತ್ಯಂತ ಮೌಲಿಕ ವಿಷಯಗಳನ್ನೊಳಗೊಂಡಿದೆ.[2] ಹೀಗಿರುವಾಗ ಈ ಪ್ರಬಂಧದಮೂಲೋದ್ದೇಶವಾದ ರೇಖೆಗಳ ಮಹತ್ವವನ್ನು ಅರಿಯಲು, ರೇಖಾ ಪ್ರಧಾನವಾದ ಚಿತ್ರಗಳ ಕಾಲಘಟ್ಟಗಳ ಸಂಕ್ಷಿಪ್ತ ಮಾಹಿತಿ ತಿಳಿಯುವುದು ಅವಶ್ಯ.

ಹಾಗೆ ನೋಡಿದಲ್ಲಿ, ಚಿತ್ರಕಲೆಯ ಹಾಸ ಆರಂಭವಾಗುವುದೇ ರೇಖಾಚಿತ್ರಗಳ ಮೂಲಕ. ಪ್ರಾದಿಮ ಮಾನವನಕಾಲದಲ್ಲಿ ಮಾತ್ರವೇ ಅಲ್ಲದೇ ನಮ್ಮ ಪುರಾಣ ಗ್ರಂಥಗಳಲ್ಲಿ “ ಚಿತ್ರಕರ್ಮದಲ್ಲಿ ರೇಖಾಪಾತ್ರವೇ ಮೊದಲ ಹೆಜ್ಜೆ “ ಎಂದು ಹೇಳಿದಂತೆ, ಪ್ರಾಯ: ರೇಖೆಗಳನ್ನು ಬಳಸಿಕೊಳ್ಳದ ಚಿತ್ರಗಳು ಈ ಪ್ರಪಂಚದಲ್ಲೇ ತುಂಬಾ ವಿರಳ[3] ಈ ರೇಖೆಯ ಪ್ರಯಾಣ ಗುಹಾಂತರಕಲೆ ಯಿಂದ ಪ್ರಾರಂಭವಾಗುತ್ತದೆ. ಅದು ಮಧ್ಯಪ್ರದೇಶದ ಉದ್ದಗಲಕ್ಕೂ ಹಬ್ಬಿರುವ ಪರ್ವತಶ್ರೇಣಿಗಳಲ್ಲಿ ನೂರಾರು ಕಡೆಗಳಲ್ಲಿ ಸಾವಿರಾರು ಗುಹಾ ಚಿತ್ರಗಳನ್ನು ಈಗಾಗಲೇ ಗುರುತಿಸಲಾಗಿದೆ. ಅವುಗಳಲ್ಲಿ ಮುಖ್ಯವಾಗಿ ಭೂಪಾಲ್ ಬಳಿಯಿರುವ ಬೆಂಬೆಟ್ಕಾ ಪ್ರದೇಶದಲ್ಲಿ ಗುಹೆ ಹಾಗೂ ಶಿಲಾಶ್ರಯಗಳಲ್ಲಿರುವ ರೇಖಾಚಿತ್ರಗಳು ಪ್ರಸಿದ್ಧವಾಗಿವೆ. ಕ್ರಿ.ಪೂ. 25,000 ವರ್ಷಗಳಿಂದ ಹಿಡಿದು ಕ್ರಿಸ್ತಶಕದ ಆರಂಭದ ಕಾಲದವರೆಗೆ ಹಲವಾರು ಹಂತಗಳಲ್ಲಿ ಈ ಚಿತ್ರಗಳು ಬೆಳೆದು ಬಂದಿರುವುದನ್ನು ಕಾಣಬಹುದು.[4]. ಕ್ರಿ.ಪೂ.3000–1500 ಮಹೇಂಜೊದಾರೊ, ಮತ್ತು ಹರಪ್ಪಾಗಳಲ್ಲಿ ಸಿಂಧೂ ಕಣಿವೆಯ ಸಂಸ್ಕೃತಿಯಲ್ಲಿ[5]. ಭಾರತದ ಹಲವಾರು ಪರದೇಶಗಳಲ್ಲಿ ಗುಹಾಂತರ ಚಿತ್ರಗಳು ದೊರತಂತೆಯೇ ಕರ್ನಾಟಕದ ಹಲವರು ಪ್ರದೇಶಗಳಲ್ಲಿಯೂ ಗುಹಾಂತರ ಚಿತ್ರಗಳನ್ನು ಗುರುತಿಸಲಾಗಿದೆ.

ಬೌದ್ಧ ಚಿತ್ರಕಲೆ ಯು ಭಾರತದಲ್ಲಿ ದೊಡ್ಡಸ್ಥಾನವನ್ನು ಗಳಿಸಿದೆ. ಅದರ ಉದಾಹರಣೆಗಳೆಂದರೆ, ಅಜಂತಾ ಮತ್ತು ಭಾಗಾ ಗವಿಗಳಾಗಿವೆ. ವಿಶ್ವದ ಚಿತ್ರಕಲೆಯ ಇತಿಹಾಸದಲ್ಲಿ ತನ್ನದೇ ಆದ ಸ್ಥಾನಗಳಿಸಿಕೊಂಡಿರುವ ಅಜಂತಾ ಚಿತ್ರಕಲೆಯು ಭಾರತೀಯ ಚಿತ್ರಕಲೆಯ ಆಸ್ತಿಭಾರವಾಗಿದೆ. ಇದು ಭಾರತೀಯ ಜನಜೀವನ, ಧರ್ಮ, ಸಂಸ್ಕೃತಿಗಳನ್ನು ತೋರಿಸುತ್ತದೆ. ಕ್ರಿ.ಪೂ.1ನೇ ಶತಮಾನದಿಂದ 7ನೇ ಶತಮಾನದ ಅವಧಿಯಲ್ಲಿ ಚಿತ್ರಿಸಲ್ಪಟ್ಟ ಅಜಂತಾ ಗುಹೆಯಲ್ಲಿರುವ ವಿಶಾಲ ಭಿತ್ತಿಚಿತ್ರಗಳು ಭಾರತದ ಹಿಂದಿನ ಕಾಲದ ಮತ್ತು ಆಗಿನ ಸಮಕಾಲದ ರಾಜರ, ಮಹಾರಾಜರ ಸಾಮಾನ್ಯ ಜನಗಳ ಸುಂದರ ಕಲಾಮಯ ಮತ್ತು ಸ್ಪೂರ್ತಿದಾಯಕ ನಾಗರೀಕತೆಯನ್ನು ಪ್ರದರ್ಶಿಸುತ್ತದೆ[6].

ಬಾದಾಮಿ ಚಿತ್ರಕಲೆ 6ನೇ ಶತಮಾನದ, ಬಾದಾಮಿಗೆ ಪೂರ್ವಕಾಲದಲ್ಲಿ ವಾತಾಪಿ ಎಂಬ ಹೆಸರಿತ್ತು. ಅದು ಚಾಲುಕ್ಯದ ರಾಜಧಾನಿಯಾಗಿತ್ತು. ಐಹೊಳೆಯ ಸಮೀಪವಿದೆ. ಅಲ್ಲಿ ನಾಲ್ಕು ಗುಹೆಗಳಲ್ಲಿ ಆ ಗುಹೆಗಳನ್ನು ಪುಲಕೇಶಿಯ ಚಿಕ್ಕಪ್ಪನಾದ ಮಂಗಲೇಶನೆಂಬವನು ಕೊರೆಯಿಸಿದನು. ಗುಹಾಮಂದಿರದ ಗೋಡೆಗಳಲ್ಲಿ ಸುಂದರವಾದ ವರ್ಣಚಿತ್ರಗಳಿವೆ. ಇವು ಅಜಂತಾ ಗುಹೆಗಳಂತೆ ಕಣಿವೆಯಲ್ಲಿ ಅಡಗಿಕೊಂಡಿಲ್ಲ. ವಾತಾವರಣದ ಏಟಿಗೆ ನೇರವಾಗಿ ಸಿಗುವಂತಿದ್ದವು. ಆದುದರಿಂದ ಈ ಪ್ರಾಚೀನ ಚಿತ್ರಗಳು ಈಗ ಗುರುತಿಸುವುದಕ್ಕೂ ಆಗದಷ್ಟು ನಶಿಸುತ್ತಾ ಕಣ್ಮರೆಯಾಗುತ್ತಿವೆ. ಇಲ್ಲಿಯ ಚಿತ್ರಗಳಲ್ಲಿ ಅಜಂತಾ ಚಿತ್ರಗಳ ಲಕ್ಷಣಗಳಿವೆ[7].

**ಪಾಲಿ ಶೈಲಿ ಚಿತ್ರಗಳು**. 9 ರಿಂದ 12ನೇ ಶತಮಾನ ಪಾಲಿ ಚಿತ್ರ ಶೈಲಿ, ಅಜಂತಾ ನಂತರ ಭಿತ್ತಿ ಚಿತ್ರ ರಚನೆ ಕಡಿಮೆಯಾಗಿ ತಾಳೆ ಎಲೆಗಳ ಗ್ರಂಥಗಳಲ್ಲಿ ಚಿತ್ರ ರಚನೆ ಆರಂಭವಾಯಿತು. ಆ ಗ್ರಂಥಗಳಲ್ಲಿ ಹೇಳಿದ ಸನ್ನಿವೇಶಗಳಿಗೆ ಸಂಬಂಧಪಟ್ಟ ದೃಷ್ಟಾಂತ (ದೃಶ್ಯ) ಚಿತ್ರಗಳಲ್ಲದೆ, ಆ ಪುಸ್ತಕಗಳ ಸೌಂದರ್ಯ ಹೆಚ್ಚಿಸಲು ಅವುಗಳಲ್ಲಿ ಅಲಂಕಾರದ ನಮೂನೆ(ಡೆಕೊರೇಟೀವ್ ಡಿಸೈನ್)ಗಳನ್ನು ಚಿತ್ರಿಸುತ್ತಿದ್ದರು[8].

**ಜೈನ ಚಿತ್ರಕಲೆ**. ಜೈನ ಚಿತ್ರಕಲೆ(ಕ್ರಿ.ಶ.11ರಿಂದ 15ನೇ ಶತಮಾನ)ಯ ಪರಂಪರೆಯು ಬೌದ್ಧ ಚಿತ್ರಕಲೆಯಷ್ಟೇ ಪ್ರಾಚೀನವಾದುದು[9]. ಬಾರತೀಯ ಚಿತ್ರಕಲೆಗೆ ಜೈನರಕೊಡುಗೆ ಅಪಾರವಾದುದು. ಆ ಕಾಲದಲ್ಲಿ ಬಂಗಾಲ. ಬಿಹಾರಗಳು ‘ಪಾಲಿ ಶೈಲಿ’ಯ ಕಲೆಗೆ ಹೆಸರಾದ ಪಾಲರಾಜರ ಆಳ್ವಿಕೆಗೊಳಪಟ್ಟಿದ್ದವು. ಈ ರಾಜ್ಯಗಳು ನಮ್ಮ ದೇಶದ ಪೂರ್ವದಿಕ್ಕಿನಲ್ಲಿರುವುದರಿಂದ ಇವರ ಕಲೆಯನ್ನು ‘ಪೂರ್ವಿ ಶೈಲಿಯ ಕಲೆ’ ಎಂದೂ ಗುರುತಿಸುವ ಪರಿಪಾಠವಿದೆ. ಈ ಆಳರಸರು ಜೈನ ಚಿತ್ರಕಲೆ ಹೆಚ್ಚಾಗಿ ಚಲಾವಣೆಯಲ್ಲಿತ್ತು. ಅಣತೆಯೇ ಈ ‘ಜೈನ ಚಿತ್ರ ಶೈಲಿಗೆ’ ‘ಪಶ್ಚಿಮೀ ಶೈಲಿ’ ಎಂದೂ ಕರೆಯಲಾಗುತ್ತದೆ·

**ಚೋಳ ಶೈಲಿ ಚಿತ್ರಗಳು**. 14ನೇ ಶತಮಾನ, ತಂಜಾವೂರಿನ ಬೃಹದೀಶ್ವರ ದೇವಾಲಯದಲ್ಲಿ ಚೋಳ ಕಲೆಯ ಉತ್ತಮ ಚಿತ್ರಗಳು ಕಂಡುಬರುತ್ತಿವೆ. ನಟರಾಜ, ಕೈಲಾಸದಲ್ಲಿ ಶಿವ ಶೈವಸಂತರು ಮೊದಲಾದ ಚಿತ್ರಗಳಿವೆ. ಒಂದು ಯುದ್ಧ ದೃಶ್ಯವೂ ಇದೆ. ಒಳಮೈ ಕಾಣುವಂತೆ ತೆಳ್ಳನೆಯ ಅಂಗಿ ಧರಿಸಿದ ಒಬ್ಬ ಸುಂದರಿಯ ಚಿತ್ರವಿದೆ. ಲಾವಣ್ಯಭರಿತವಾಗಿದೆ. ಅಜಂತಾ ಕಲೆಯ ಲಕ್ಷಣಗಳು ಕಾಣುವುದಿಲ್ಲ. ಪ್ರಾಯಶಃ 14ನೆಯ ಶತಮಾನದ ಸುಮಾರಿಗೆ ಚೋಳ ಮನೆತನದ ವೈಭವದ ಸ್ಥಿತಿಯಲ್ಲಿದ್ದಾಗ ರಚನೆಯಾಗಿರಬಹುದು[10].

**ಮೊಘಲ್ ಶೈಲಿ ಚಿತ್ರಗಳು**. ಮೊಘಲರ ಆಶ್ರಯದಲ್ಲಿ ಪೋಷಣೆಗೊಂಡು ಪ್ರಕಾಶಿಸಲ್ಪಟ್ಟ ಚಿತ್ರಕಲೆಯು ನೂತನ ಯುಗವನ್ನೇ ನಿರ್ಮಿಸಿದೆ. ತನ್ನದೇ ಆದ ಶೈಲಿಯ ಚಿತ್ರಕಲೆಯನ್ನು ಅಕ್ಬರ್ ಬಾದಷಹನಿಂದ ಪರಂಪರೆಯನ್ನು ಮುಂದುವರಿಸಲು ನಾಡಿನ ನಾಲ್ಕು ನಿಟ್ಟಿನಲ್ಲಿ ಕಲಾವಿದರಿಗೆ ಔತಣಕೊಟ್ಟು ಕರೆಯಿಸಿದನು. ರಾಜಸ್ತಾನ, ಗುಜರಾತ್ ಕಲೆಗಾರರಿಂದ ಸಂಸ್ಕೃತ ಮತ್ತು ಪರ್ಶಿಯದ ಅನುಪಮ ಸಾಹಿತ್ಯದ ಚಿತ್ರಗಳನ್ನು ತೆಗೆಯಿಸಿ ಅಲಂಕರಿಸಿದನು. ಇವುಗಳಲ್ಲಿ ‘ತೈಮಾರನಮನೆ’ ಎಂಬ ಚಿತ್ರವು ತನ್ನದೇ ಆದ ಶೈಲಿಯಲ್ಲಿ ಅನುಪಮವಾಗಿದೆ[11].

**ರಜಪೂತ ಶೈಲಿ ಚಿತ್ರಗಳು.** ರಜಪೂತ ಕಲೆಯು 16ನೇ ಶತಮಾನದ ಉತ್ತರಾರ್ಧದಿಂದ 19ನೆಯ ಶತಮಾನದ ತನಕ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಇದಕ್ಕೆ ರಾಜಸ್ಥಾನಿ ಶೈಲಿ ಎಂಬುದಾಗಿಯೂ ಹೇಳುತ್ತಾರೆ. ಏಕೆಂದರೆ ಇದರ ವಿಕಾಸವು ರಾಜರ ಆಸ್ಥಾನದಲ್ಲಾಯಿತು. ಈ ಶೈಲಿಯು ಕ್ರಮೇಣ ದಕ್ಷಿಣ ಭಾರತದ ತಂಜಾವೂರು, ರಾಮೇಶ್ವರದ ತನಕವೂ ವಿಸ್ತರಿಸಿತು. ರಜಪೂತ ಕಲೆಯಲ್ಲಿ ಮುಖ್ಯವಾಗಿ ಎರಡು ಶಾಖೆಗಳು ಕಂಡುಬರುತ್ತಿವೆ. ಒಂದು ಪಹಡಿ ಶೈಲಿ ಅಥವಾ ಪರ್ವತ ಸಾಂಪ್ರದಾಯ. ಇದು ಹಿಮಾಲಯ ಪರ್ವತಗಳ ಕೆಳಗಣ ಚಂಬಾ, ಬಸೋಲಿಯು ಜಮ್ಮುವಿನ ಸಮೀಪ ಇದೆ. ಮತ್ತೊಂದು ಜಯಪುರ ಶೈಲಿ ಜಯಪುರವು ರಜಪೂತರ ಒಂದು ಪ್ರಭಾವಶಾಲಿ ರಾಜ್ಯವಾಗಿತ್ತು[12].

**ಚಿಕಣಿ ಚಿತ್ರಗಳು :**. ಕ್ರಿ.ಶ.1320 ರಷ್ಟು ಪೂರ್ವದಲ್ಲಿ ಖಿಲ್ಜಿ ಅರಸರ ಆಶ್ರಯದಲ್ಲಿದ್ದ ವಿಖ್ಯಾತ ಅಮೀರ ಖುಸ್ರುವಿನ ಒಂದು ಕವನ ಸಂಗ್ರಹದಲ್ಲಿ ಪರ್ಷಿಯಾದ ಚಿತ್ರಶೈಲಿಯ ಮೋಹಕವಾದ ಹಲವು ಚಿತ್ರಗಳಿರುವುದನ್ನು ಕಂಡಿದ್ದೇನೆ. (ಬಿಜಾಪುರ ಮ್ಯೂಸಿಯಂನಲ್ಲಿ) ಇವುಗಳ ಶೈಲಿ ಮತ್ತು ರೀತಿಗಳ ಪ್ರಭಾವ ಕಾಲಕ್ರಮದಲ್ಲಿ ಪಶ್ಚಿಮ ಭಾರತದಲ್ಲಿ ಎಂದರೆ ಗುಜರಾತು. ರಜಪೂತಾನಗಳ, ದೇಶೀಯ ಚಿತ್ರಕಾರರ ಮೇಲೆ ಬೀಳತೊಡಗಿತು. ಅದೇ ರೀತಿಯಲ್ಲಿ ರಜಪೂತಾನದ ವಿವಿಧ ಪ್ರಾಂತಗಳಲ್ಲೂ, ಪಂಜಾಬು ಕೋಲು ಕಣಿವೆಯ ದೇಶೀಯ ಚಿತ್ರಕಾರದ ಮೇಲೆಯೂ ಬಿದ್ದುದರಿಂದ, ಆ ಪ್ರದೇಶಗಳ ಚಿತ್ರಗಾರರೂ ಪ್ರಭಾವಿತರಾದರು. ದಕ್ಷಿಣದಲ್ಲಿಯೂ ಕಾಗದದ ಮೇಲೆ ಚಿತ್ರ ಬರೆಯುವ ಪ್ರವೃತ್ತಿ ಔರಂಗಜೇಬನ ಕಾಲದಲ್ಲಿ ಆಳುತ್ತಿದ್ದ ಗೋಲ್ಕಂಡ, ಅಹಮ್ಮದ್ ನಗರ, ಬಿಜಾಪುರ ಪ್ರದೇಶಗಳ ಸುಲ್ತಾನರ ಕಾಲದಲ್ಲಿ ಹಬ್ಬಿತು[13].

**ವಿಜಯನಗರಶೈಲಿ ಚಿತ್ರಗಳು.** ವಿಜಯನಗರ ಸಾಮ್ರಾಜ್ಯದ ದಕ್ಷಿಣ ಭಾರತ ಸಂಸ್ಕೃತಿಯ 'ರೂಪಕ' ಎಂದು ಬಾರ್ಬೊಸ್ ಹೇಳಿದ್ದು ಪ್ರಾಚೀನ ಸಂಪ್ರದಾಯಗಳ ಘೋಷಣೆಯ ದೃಷ್ಟಿಯಿಂದ ತುಸು ಸತ್ಯವೆನಿಸುತ್ತದೆ. ಅದರ ಪ್ರಮುಖ ಅರಸರು ನಿಜಕ್ಕೂ ಕೊಡುಗೈ ದೊರೆಗಳಂಗಿದ್ದರಿಂದ ಸಾಹಿತ್ಯ. ಸಂಗೀತ–ನೃತ್ಯ–ಶಿಲ್ಪಕಲೆ ವೈವಿಧ್ಯಮಯವಾಗಿ ಬೆಳೆದವು[14]. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪೆಯ ವಿರುಪಾಪಷ ಗುಡಿಯ ಮಂಟಪದ ಮುಚ್ಚಿಗೆಯಲ್ಲಿನ ರಾಮಾಯಣದ ಕೆಲವೊಂದು ದೃಶ್ಯಗಳನ್ನು. ಪುರಣಾದಿ ಕಥನಗಳ ಚಿತ್ರಗಳನ್ನು ತೋರಿಸುತ್ತವೆ. ಅವುಗಳ ಜೊತೆಯಲ್ಲಿ ಚಾರಿತ್ರಿಕವಾದೊಂದು ಘಟನೆಯೂ ಇದೆ. ಅದು ಆ ರಾಜ್ಯದ ಸ್ಥಾಪನಾಚಾರ್ಯರೆನಿಸಿದ ವಿದ್ಯಾರಣ್ಯ ಸ್ವಾಮಿಗಳ ಪಲ್ಲಕ್ಕಿ ಮೆರವಣಿಗೆಯ ದೃಶ್ಯ, ಹಕ್ಕಬುಕ್ಕರೆಂಬ ಸೋದರರಿಗೆ ಮಾರ್ಗದರ್ಶಕರಾಗಿ ಅವರಿಂದ ಆ ರಾಜ್ಯವನ್ನು ಸ್ಥಾಪಿಸಿದ ಅವರನ್ನು ಚಿತ್ರದ ಮೂಲಕ ಸ್ಮರಿಸಿದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಪಲ್ಲಕ್ಕಿಯಲ್ಲಿ ಕುಲ್ಕತ ವಿದ್ಯಾರಣ್ಯರನ್ನು ನಾಲ್ಕು ಮಂದಿ ಬೋವಿಗಳು ಸಾಗಿಸುತ್ತಿದ್ದಾರೆ. ಅವರ ಹಿಂದೆ, ಮುಂದೆ, ಮಗ್ಗುಲಗದ್ದಲ್ಲಿ ಬಿರುದು ಬಾವಲಿಗಳನ್ನು ಹಿಡಿದ ಸೇವಕರು ಕಾಣಿಸುತ್ತಾರೆ. ಬೆಂಗಡೆಯಿಂದ ಅಂಬಾರಿ ಹಾಕಿದ ಆನೆಯೊಂದು ಬರುತ್ತಿದೆ. ಇವರೆಲ್ಲರೂ ಮಗ್ಗುಲ ಮೈಯಲ್ಲಿ ಚಿತ್ರಿತರಾಗಿದ್ದಾರೆ. ನಮ್ಮ ಕಣ್ಣೆದುರಿನ ನೋಟಕ್ಕೆ – ಎದುರಿನವರು ಹಿಂದಿದ್ದವರನ್ನು ಮರೆಯಿಸದ ರೀತಿಯಲ್ಲಿ ಅವರನ್ನು ಎತ್ತರದ ಸಾಲಿನಲ್ಲಿ ತೋರಿಸಿದ್ದಾರೆ. ನಾವು ಅವನ್ನೆಲ್ಲ ಇದಿರಿನಿಂದಿಲೂ ಎತ್ತರದಿಂದಲೂ ಕಂಡಂತೆ ಭಾಸವಾಗುತ್ತದೆ. ಈ ತೆರನಲ್ಲಿ ಈ ಚಿತ್ರದಲ್ಲಿ ಪರಿದೂರ(ಪರ್ಸ್ಪೆಕ್ಟೀವ್)ವನ್ನು ತೋರಿಸಿದ ರೀತಿ ಚಮತ್ಕಾರದ್ದಾಗಿದೆ[15]. ಲೇಪಾಕ್ಷಿಯು (16ನೇ ಶತಮಾನ) ಅನಂತಪುರ ಜಿಲ್ಲೆಯ ಹಿಂದೂಪುರವೆಂಬಲ್ಲಿಂದ 9 ಮೈಲು ದೂರ ಮೈಸೂರು – ಆಂದ್ರ ಗಡಿಪ್ರದೇಶದ ರಾಯಲಸೀಮೆಯಲ್ಲಿದೆ. ಅಲ್ಲಿಯ ಪಾಪನಾಶೇಶ್ವರ ದೇವಾಲಯದ ಮಂಟಪದಲ್ಲಿ ಗಿರಿಜಾಕಲ್ಯಾಣ, ಅರ್ಜುನನ ತಪಸ್ಸು, ದಕ್ಷಿಣಾ ಮೂರ್ತಿ ಮೊದಲಾದ ಚಿತ್ರಗಳಿವೆ. ವೀರಭದ್ರ ಗುಡಿಯಲ್ಲೂ ನೂರಾರು ಚಿತ್ರಗಳಿವೆ. ಅವು ವಿಜಯನಗರ ಸಾಮ್ರಾಜ್ಯದ ವೈಭವವನ್ನು ಸೂಚಿಸುತ್ತದೆ. ಉತ್ತಮ ಕಲಾಕೃತಿಗಳಾಗಿವೆ. ಶ್ರೀರಾಮ ಪಟ್ಟಾಭಿಷೇಕ, ರಾಮಾಯಣ ಮತ್ತು ಇತರ ಕಾವ್ಯಗಳ ಭವ್ಯದೃಶ್ಯ. ಶಿವಾನುಗ್ರಹಗಳನ್ನು ನಿದರ್ಶಿಸುವ ಚಿತ್ರಶ್ರೇಣಿ ಮತ್ತು ರಾಜಮಹಾರಾಜರ ದರ್ಬಾರದ ಚಿತ್ರಗಳಿವೆ. ಅಮೂಲವ್ಯವಾದ ಆಭರಣಗಳಿಂದ ಸಾಲಂಕೃತರಾದ ಸ್ತ್ರೀಯರು ತಲೆಗೂದಲನ್ನು ಕಟ್ಟಿದ ನಮೂನೆಗಳು ತುಂಬಾ ಸೊಗಸಾಗಿವೆ. ಉಡುಗೆಯ ಮೇಲೆ ಸುಂದರವಾದ ಹೂವಿನ ಚಿತ್ರಗಳಿವೆ. ಈಗ ಎಲ್ಲವೂ ನಶಿಸಿ ಅಸ್ಪಷ್ಟವಾಗಿವೆ[16].

**ಡೆಕ್ಕನೀಶೈಲಿ ಚಿತ್ರಗಳು.** ಡೆಕ್ಕನೀ ಕಿರುಚಿತ್ರಗಳು, ಮೊಘಲ್ ಕಲಾ ಶೈಲಿಯಂತೆಯೇ ಗೋಚರಿಸುವ ಅಷ್ಟೇ ಪ್ರಭಾವಶಾಲಿಯಾದ ವರ್ಣಚಿತ್ರಕಲಾ ಶೈಲಿಯೊಂದು ಮೊಘಲರ ಆಳ್ವಿಕೆಯ ಪ್ರಾರಂಭದ ಕಾಲದಲ್ಲಿಯೇ ದಕ್ಷಿಣ ಭಾರತದ ಮುಸಲ್ಮಾನರ ಆಶ್ರಯದಲ್ಲಿ ಬೆಳವಣಿಗೆಯನ್ನು ಹೊಂದುತ್ತಾ ಬಂದಿತ್ತು. ಈ ದಕ್ಷಿಣ ಭಾರತದ ಸುಲ್ತಾನರ ವರ್ಣಚಿತ್ರ ಕಲಾಶೈಲಿಯು ಪರ್ಷಿಯನ್ ಮತ್ತು ಟರ್ಕಿಷ್ ಮೂಲಗಳ ಸಮ್ಮಿಶ್ರಣವಾಗಿದೆಯಲ್ಲದೇ ಭಾರತೀಯರ ಸ್ಥಾನಕ ಪ್ರಭಾವಕ್ಕೊಳ ಪಟ್ಟುದಾಗಿದೆ. ಡೆಕ್ಕನೀ ಭಾವಚಿತ್ರಗಳು ಮತ್ತು ಹಸ್ತಪ್ರತಿಗಳ ಸಂದರ್ಭ ಚಿತ್ರಗಳು ಸುಧರಿತ ರೇಖಾವಿನ್ಯಾಸ ಹಾಗೂ ನಿರ್ಧಿಷ್ಟ ವರ್ಣವಿನ್ಯಾಸಗಳಿಂದ ಕೂಡಿದವುಗಳಾಗಿವೆ[17].

**ರಾಗಮಾಲಾ ಶೈಲಿ ಚಿತ್ರಗಳು.** ರಾಗಮಾಲಾ ಚಿತ್ರಗಳು. ಎಂದರೆ ಸಂಗೀತರಾಗಗಳ ಹಾರ ಎಂದರ್ಥ. ಇದು ರಜಪೂತ ಚಿತ್ರಕಲೆಯ ಒಂದು ಅಂಗವಾಗಿದೆ. ಹದಿನೇಳನೆಯ ಶತಮಾನದಲ್ಲಿ ನಿರ್ಮಾಣವಾಯಿತು. ಇವು ರಾಗಗಳ ದೃಶ್ಯನಿರೂಪಣೆಗಳು. ಇದು ವಿಶ್ವದ ಹೊಸ ಸಾಧನೆ, ಇನ್ನೆಲ್ಲಿಯೂ ಇಲ್ಲ. ಸಂಗೀತಗಾರರು ಹಾಡಿದ ರಾಗಗಳು ಶ್ರಾವಕರ ಮನಸ್ಸಿನ ಮೇಲೆ ಮೂಡಿಸುವ ಭಾವಗಳನ್ನೂ ತಮ್ಮ ಕುಂಚದಿಂದ ರಜಪೂತ ಚಿತ್ರಗಾರರು ಪ್ರೇಕ್ಷಕರು ಮನಸ್ಸಿನಲ್ಲಿ ಮೂಡುವಂತೆ ವರ್ಣಚಿತ್ರಗಳನ್ನು ರಚಿಸಿದರು[18].

**ಬಸೋಲಿ ಶೈಲಿ ಚಿತ್ರಗಳು.** ಇದು 17–18ನೆಯ ಶತಮಾನಗಳಲ್ಲಿ ಉತ್ಕೃಷ್ಟ ಸ್ಥಿತಿಗೇರಿತು. ಆ ರಾಜ್ಯಾಶ್ರಯ ಪಡೆದ ದಿಲ್ಲಿಯ ಮೊಘಲ ಮತ್ತು ರಜಪೂತ ಕಲಾಕಾರರು ಅವರ ನವಜೀವನವನ್ನು ತುಂಬಿದರು. ಬಸೋಲಿ ಕಲೆ ಊರ್ಜಿತವಾಯಿತು. ಬಸೋಲಿ ಕಲೆಯು ಸ್ಪೂರ್ತಿಯ ಮೂಲವು ವೈಷ್ಣವ ಧರ್ಮವಾಗಿತ್ತು. ಬಸೋಲಿ ರಾಜರು ವಿಷ್ಣು ಭಕ್ತರಾಗಿದ್ದರು. ಕೃಷ್ಣಲೀಲೆಗಳ ಚಿತ್ರ ಹೆಚ್ಚು ಸಂಖ್ಯೆಯಲ್ಲಿ ಸೃಜನಗೊಂಡವು. ಜಯದೇವನ ಗೀತಗೋವಿಂದ ಕಾವ್ಯದ ಸನ್ನಿವೇಶ, ರಸಮಂಜರಿ ಎಂಬ ಗ್ರಂಥದ ಶೃಂಗಾರ ಭಾಗಗಳಲ್ಲಿ ಬರುವ ನಾಯಕ ನಾಯಕಿಯರ ಚಿತ್ರಗಳು, ಭಾಗವತ ಪುರಾಣ ಮತ್ತು ರಾಮಾಯಣದ ಕೆಲವು ಚಿತ್ರಗಳೂ ಇವೆ. ಇವಲ್ಲದೇ ಕಲಾವಿದರಿಗೆ ಆಶ್ರಯ ನೀಡಿದ ರಾಜರ, ಸರದಾರರ, ಶ್ರೀಮಂತರ, ವ್ಯಕ್ತಿಚಿತ್ರಗಳೂ ಸಾಕಷ್ಟು ನಿರ್ಮಾಣವಾಗಿದೆ. ಕಾಂಗ್ರಾ, ಚಿತ್ರದ ಲಾವಣ್ಯವು ಮುಖ್ಯವಾಗಿ ಛಂದೋಬದ್ಧವಾದ ಲಲಿತ ಗೆರೆಗಳ ಚಲನೆಯಲ್ಲಿದೆಯಾದರೆ, ಬಸೋಲಿ ಚಿತ್ರಗಳ ಸೌಂದರ್ಯ ಅದರ ವರ್ಣಶೋಭೆಯಲ್ಲಿದೆ[19].

**ಕಾಂಗ್ರಾಶೈಲಿ ಚಿತ್ರಗಳು**. ಕಾಂಗ್ರಾಶೈಲಿಯ (ಪಹಾಡೀ ಚಿತ್ರಕಲೆ) ಕ್ರಿ.ಶ.18–19 ನೆ ಶತಮಾನ. ಅಜಂತಾದಂತೆ ರೇಖಾ ಪ್ರಮುಖವಾದುದು. ಅದು ರೇಖಲಾಲಿತ್ಯ ಅಲಂಕಾರ ವೈಖರಿ, ಸೂಕ್ಷ್ಮ ವಿವರಗಳು, ವರ್ಣಗಳ ಹೊಳಪು – ಇವುಗಳಿಂದಾಗಿ ಖ್ಯಾತಿ ಹೊಂದಿದೆ. ಆ ಚಿತ್ರಗಾರರು ಕಾಗದಗಳ ಮೇಲೆ ಪ್ರಥಮತಃ ತೆಳು ಕೆಂಪು ಬಣ್ಣದಿಂದ ಹೊರರೇಖೆ ಎಳೆಯುತ್ತಿದ್ದರು. ಅನಂತರ ಅದರೊಟ್ಟಿಗೆ ಯಥೋಚಿತ ಬಣ್ಣಗಳನ್ನು ಹಾಕುತ್ತಿದ್ದರು. ಕೊನೆಗೆ ಕಂದು ಅಥವಾ ಕಪ್ಪು ಬಣ್ಣದಿಂದ ಪುನಃ ಬಾಹ್ಯರೇಖೆಗಳನ್ನು ಎಳೆಯುತ್ತಿದ್ದರು[20]. (ಬಾಯರಿ 1972:73)

**ಮೈಸೂರು ಶೈಲಿ ಚಿತ್ರಗಳು**. 19–20 ನೆಯ ಶತಮಾನ. ಭಾರತೀಯ ಚಿತ್ರಕಲೆಯ ಇತಿಹಾಸದಲ್ಲಿ ಮೈಸೂರು ಶೈಲಿಯ ಚಿತ್ರಗಳಿಗೆ ವಿಶಿಷ ಪ್ರಾಮುಖ್ಯತೆ ಇದೆ. ಅನೇಕ ಶತಮಾನಗಳ ಕಾಲ ರೂಢಿಯಲ್ಲಿದ್ದ ಈ ಶೈಲಿ 19ನೆ ಶತಮಾನದಲ್ಲಿ ಬಹಳ ಉಚ್ಛ್ರಾಯ ಸ್ಥಿತಿಯನ್ನು ಪಡೆದಿತ್ತು[21].(ನಂಜುಂಡರಾವ್ 1993:298) ಈ ಶೈಲಿಯಲ್ಲಿ ಕೃತಿರಚಿಸಿ ಕಲಾವಿದರು ಅನೇಕ ವ್ಯಕ್ತಿಚಿತ್ರಗಳನ್ನು ದಂತದ ಮೇಲೆ ಚಿತ್ರಿಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರು 1860ರಲ್ಲಿ ಜಗನ್ಮೋಹನ ಚಿತ್ರಶಾಲೆಯನ್ನು ಕಟ್ಟಿಸಿದರು. ಅದು ಈಗ ಉತ್ತಮ ಕಲಾಕೃತಿಗಳ ಸಂಗ್ರಹಾಲಯವಾಗಿದೆ. ಅದರ ಎರಡನೆಯ ಮಹಡಿಯಲ್ಲಿ ಭಿತ್ತಿ ಚಿತ್ರಗಳಿವೆ. ಮೈಸೂರು ಅರಸರ ವಂಶವೃಕ್ಷವನ್ನು ನಿರೂಪಿಸುವ ಸುಂದರ ಕೃತಿಯಾದ ಸಂತಾನಾಂಬುಜ, ಆನೆ ಕಟ್ಟಿದ ರಥದಲ್ಲಿ ಕುಳಿತು ಜಂಬೂಸವಾರಿ, ಹುಲಿ, ಭೇಟೆ, ವಸಂತೋತ್ಸವ ದೃಶ್ಯ, ಮೊದಲಾದ ಚಿತ್ರಗಳಿವೆ. 'ಶ್ರೀ ತತ್ವನಿಧಿ' ಎಂಬ ಗ್ರಂಥದಲ್ಲಿ ಶ್ಲೋಕಗಳಿಗನುಸಾರವಾಗಿ ಪ್ರತಿಪುಟದಲ್ಲೂ ಚಿತ್ರಗಳನ್ನು ರಚಿಸಲಾಗಿತ್ತು. ಮೈಸೂರು ಶೈಲಿಯ ಚಿತ್ರಗಳಲ್ಲಿ ಸೂಕ್ಷ್ಮ ಕೆಲಸ ವಿವರಗಳಿಗೆ ಹೆಚ್ಚಿಗೆ ಗಮನ ಕೊಟ್ಟುದು ಕಂಡುಬರುತ್ತದೆ, ಚಿತ್ರ 29.ಶ್ರವಣ ಬೆಳ್ಗೊಳದ ಶಾಂತಿನಾಥ ಬಸರಿ ಮತ್ತು ಜೈನಮಠಗಳಲ್ಲೂ ಚಿತ್ರಕೃತಿಗಳಿವೆ[22].

ಪ್ರಸ್ತುತ ಪ್ರಭಂದಕ್ಕೆ ಆಯ್ದುಕೊಂಡ ಚಿತ್ರ ರಾಮ ಪಟ್ಟಾಭಿಷೇಕ ದ ವಿವರಗಳು ಈ ಕೆಳಗಿನಂತಿವೆ.



ಶೀರ್ಷಿಕೆ : ಶ್ರೀ ರಾಮ ಪಟ್ಟಾಭಿಷೇಕ

ಅಳತೆ : 60– 85 ಸೆಂಟಿಮೀಟರ್

ಕಲಾವಿದ : ಅಪರಿಚಿತ

ಕೃತಿ ರಚನೆಯ ವರ್ಷ : ಸಿಐಆರ್‌ಸಿಎ 1850 ಎ.ಡಿ.

ಈ ಕೃತಿ ರಚಿಸಿದ ಕಲಾವಿದನಿಗೆ ವಾಲ್ಮೀಕಿ ರಾಮಾಯಣ ಮಹಾಕಾವ್ಯದಿಂದ ಸ್ಫೂರ್ತಿಯಾಗಿದ್ದು, ಉತ್ತಮವಾದ ಸಮೋತಲನವನ್ನು ಹೊಂದಿದ ಸಂಯೋಜನೆಯಾಗಿದೆ. ಈ ಶ್ರೀ ರಾಮ ಪಟ್ಟಾಭಿಷೇಕ ಚಿತ್ರದಲ್ಲಿ ಬರುವ ಎಲ್ಲ ಪಾತ್ರಗಳನ್ನು ಅವರ ಉಡುಗೆಗಳನ್ನು ಆ ಮಹಾಕಾವ್ಯದಲ್ಲಿ ವರ್ಣಿಸಿದ ರೀತಿಯಲ್ಲಿ ಚಿತ್ರಿಸಲಾಗಿದೆ. ಶ್ರೀ ರಾಮನು ಪಟ್ಟಾಭಿಶೇಕ ನಡೆಯುತ್ತಿರುವ ಪ್ರಾಂಗಣದ ಮಧ್ಯಭಾಗದಲ್ಲಿರುವ ಸಿಂಹಾಸನದಮೇಲೆ ಕುಳಿತಿದ್ದು, ಸೀತೆ ಅವರ ಪಕ್ಕದಲ್ಲಿದ್ದಾರೆ. ಮತ್ತು ಸಹೋದರರಾದ ಲಕ್ಷ್ಮಣ, ಭರತ, ಶತೃಘ್ನರಿಂದ ಸುತ್ತುವರೆಯಲ್ಪಟ್ಟ ಶ್ರೀ ರಾಮನು, ಹನುಮಾನನು ಅವರ ಪಾದದ ಬಳಿ ಕುಳಿತಿದ್ದು ಪಾದಗಳನ್ನು ಒತ್ತುತ್ತಿದ್ದಾನೆ. ಪ್ರಾಂಗಣದ ಇನ್ನೊಂದು ಬದಿ ನೃತ್ಯಕಿಯರು ಸಾಲಾಗಿ ನಿಂತಿದ್ದಾರೆ. ವಾನರ ಸೇನೆ, ಋಷಿಗಳು ಮತ್ತು ರಾಜಮಹಿಳೆಯರು ಒಂದು ಬದಿಗೆ ತೋರಿಸಿದರೆ, ಮತ್ತೆ ಮಹಿಳೆಯರು ಹಾಗೂ ಸೈನ್ಯಾಧಿಕಾರಿಗಳು ಮತ್ತೊಂದೆಡೆಗೆ ತೋರಿಸಲಾಗಿದೆ.ಉಳಿದವರನ್ನು ಚಿಕ್ಕ ಪ್ರಮಾಣದಲ್ಲಿ ಚಿತ್ರಿಸಲಾಗಿದ್ದು, ಅಲ್ಲಿ ಕಾಣುವ ಎಲ್ಲ ಪಾತ್ರಗಳನ್ನು 18ನೇ ಶತಮಾನದ ಉಡುಗೆಗಳಿಂದ ಅಲಂಕರಿಸಲಾಗಿದೆ. ರಾಜ್ಯದ ಆನೆಗಳು ಮತ್ತು ಕುದುರೆಗಳನ್ನು ಕೆಳಗಿನ ಸಾಲಿನಲ್ಲಿ ತೋರಿಸಿದ್ದು, ಕೆಂಪು, ಬಂಗಾರ, ಹಸಿರು ಮತ್ತು ಇತರೆ ವರ್ಣಗಳಿಂದ ಪ್ರತಿಯೊಂದು ಆಕಾರಗಳನ್ನು ಪ್ರತ್ಯೇಕವಾಗಿ ಎದ್ದು ಕಾಣುವಂತೆ ನಿರೂಪಿಸಲಾಗಿದೆ. ಒಟ್ಟಾರೆ ಇದೊಂದು ಕರ್ನಾಟಕ ಸಾಂಪ್ರದಾಯಿಕಕಲೆಯಲ್ಲಿಯ ಉತ್ತಮವಾದ ಕೃತಿಯಾಗಿದೆ[23].

**ಉಪಸಂಹಾರ**. ಈ ಪ್ರಬಂಧಕ್ಕಾಗಿ ಆಯ್ದುಕೊಂಡ ಕರ್ನಾಟಕ ಸಾಂಪ್ರದಾಯಿಕಕಲೆಯಲ್ಲಿಯ ಚಿತ್ರ 'ರಾಮ ಪಟ್ಟಾಭಿಷೇಕ' ವಾದರು ಸಾಮಾನ್ಯವಾಗಿ ಭಾರತೀಯ ಸಾಂಪ್ರದಾಯಿಕಕ ಚಿತ್ರ ಶೈಲಿಗಳಲ್ಲಿ 'ರೇಖೆ' ಯ ಬಳಕೆಯ ಆಶಯವೇ ಆಗಿದೆ. ಅದಕಾರಣ ಗುಹಾಂತರ ಚಿತ್ರಕಲೆಯಿಂದ ಇಪ್ಪತ್ತನೇ ಶತಮಾನದ ಮೈಸೂರು ಶೈಲಿ ಚಿತ್ರಕಲೆಯವರೆಗಿನ ಎಲ್ಲ ಚಿತ್ರಕಲಾ ಪರಂಪರೆಯನ್ನು ನಾವು ಗಮನಿಸಿದಾಗ ಆಯಾ ಕಾಲಘಟ್ಟಗಳ ಭೌಗೋಲಿಕ, ಸಾಮಾಜಿಕ, ಮತ್ತು ಆರ್ಥಿಕ ಜೀವನ ಪದ್ಧತಿಗಳನ್ನು ಆಧಾರಿಸಿದ ಕಲಾ ಚಟುವಟಿಕೆಗಳ ಉದಾಹರಣೆಗಳು ನೋಡಲು ಸಿಗುತ್ತವೆ. ಮತ್ತು ಚಿತ್ರಶೈಲಿಗಳನ್ನು ಅವಲೋಕಿಸಿದಾಗ ಬಹುತೇಕ ಎಲ್ಲ ಶೈಲಿಗಳಲ್ಲಿ ರೇಖೆಗಳಿಗೆ ಅತ್ಯಧಿಕವಾದ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಮತ್ತು ಅದಕ್ಕೆ ಸಕಾರಣಗಳು ಇವೆ. ನಾಗರೀಕತೆಯ ಪೂರ್ವದಿಂದ ಈ ಚಿತ್ರಕಲೆ ಬಳಕೆಯಲ್ಲಿದ್ದು ಆಯಾ ಕಲಾದಲ್ಲಿ ಉಪಲಬ್ಧವಿದ್ದ ಸಲಕರಣೆಗಳು ಮತ್ತು ಸಂದರ್ಭಗಳು ಕೂಡಾ ಇದಕ್ಕೆ ಕಾರಣವಾಗಿರಬಹುದು. ಉದಾಹರಣೆಗಾಗಿ ಚಿತ್ರಿಸಲು ಆಯ್ದುಕೊಂಡ ತೆರಪು (ಸ್ಥಳ) ಮತ್ತು ವಸ್ತುವಿಷಯ. ಜೊತೆಗೆ ವಿವಿಧ ರೇಖೆಗಳ ಬಳಕೆಯನ್ನೂ ನೋಡಬಹುದು. ಆದಿಮಾನವನ ಚಿತ್ರಗಳಲ್ಲಿ ಕಂಡುಬರುವ ವರಟು ಮತ್ತು ಮೊನಚಾದ ರೇಖೆಗಳನ್ನ ನೋಡಿದಾಗ ಅಲ್ಲಿ ರೆಖಾ ರಚನೆಗೆ ಸಿಕ್ಕ ಸಲಕರಣೆ ಮತ್ತು ಅವರ ಸ್ವಭಾವವೇ ಕಾರಣವಾಗಿರಬಹುದು. ಅಜಂತಾ ಗುಹೆಗಳಲ್ಲಿಯ ಚಿತ್ರಗಳನ್ನು ನೋಡಿದಾಗ ಅಲ್ಲಿ ಉಪಲಬ್ಧವಿದ್ದ ಎತ್ತರದ ಸ್ಥಳದಿಂದಾಗಿ, ನೋಡುಗನಿಂದ ಹೆಚ್ಚು ಅಂತರದಲ್ಲಿರುವ ಆ ಚಿತ್ರಗಳು ಪ್ರೇಕ್ಷಕನಿಗೆ ತಲುಪಿಸುವ ಕಾರಣ ರೇಖೆಯ ಬಳಕೆ ಆ ಚಿತ್ರದ ತಾಂತ್ರಿಕಾಂಶಗಳಲ್ಲಿ ಪ್ರಮುಖವಾಗಿದೆ. ನಂತರದ ಭಾರತೀಯ ಸಾಂಪ್ರದಾಯಿಕ ಶೈಲಿಗಳು ಮತ್ತು ಮೈಸೂರು ಶೈಲಿಯ ಈ 'ರಾಮ ಪಟ್ಟಾಭಿಷೇಕ' ಚಿತ್ರಶೈಲಿಯಲ್ಲಿ ರೇಖೆಯ ಬಳಕೆಯನ್ನು ನೋಡಿದರೆ, ಅಲ್ಲಿ ಸಿಗುವ ಕಾರಣಗಳಲ್ಲಿ ಸಾಮ್ಯತೆಯನ್ನು ಕಾಣಬಹುದು. ಹೇಗೆಂದರೆ, ಎಲ್ಲಾ ಚಿತ್ರಗಳನ್ನು ಗಮನಿಸಿದಾಗ ಪ್ರಮುಖವಾಗಿ

ಕಂಡುಬರುವ ಅಂಶವೆಂದರೆ ಚಿತ್ರರಚನೆಗೆ ಬಳಸಿದ ಸೀಮಿತ ಸ್ಥಳಾವಕಾಶ. ಆ ಸೀಮಿತ ಸ್ಥಳಾವಕಾಶದಲ್ಲಿ ಅವರು ಹೇಳಬೇಕೆಂದಿರುವ ವಸ್ತುವಿಷಯ ಅಪಾರ. ಅಲ್ಲಿ ಬರುವ ಎಲ್ಲ ಪಾತ್ರಗಳು ಮತ್ತು ಸನ್ನಿವೇಷಗಳವಿಂಗಡನೆಗೆ 'ರೇಖೆ' ಬೆನ್ನೆಲುವಾಗಿ ನಿಲ್ಲುತ್ತದೆ. ಮತ್ತು ಅಲ್ಲಿ ಬರುವ ಕಥಾ ಚರಿತೆಯಲ್ಲಿಯ ಎಲ್ಲ ಪಾತ್ರಗಳನ್ನು ಹಿಡಿದಿಡುವ (ಗುರುತಿಸುವ)ಪ್ರಯತ್ನ ಅದರದ್ದಾಗಿರುತ್ತದೆ. ಇನ್ನು ಸೌಂದರ್ಯ ದೃಷ್ಟಿಯಿಂದ ನೋಡಿದಾಗ ಅಲ್ಲಿ ಬಳಸಿದ ನುರಿತ ನಾಜೂಕಾದ ಮತ್ತು ತೀಕ್ಷ್ಣ ವಾದ ರೇಖೆಗಳು ಅಲ್ಲಿಯ ಪ್ರತಿಯೊಂದು ಆಕಾರಗಳನ್ನು ಮನಮುಟ್ಟುವಹಾಗೆ ಮಾಡುವುದಲ್ಲದೇ, ಆಕರ್ಷಕವಾಗಿ ಕಾಣುವ ಉದ್ದೇಶವನ್ನು ಕೂಡಾ ಪೂರೈಸುತ್ತವೆ. ಇನ್ನೊಂದು ವಿಶೇಷವೆಂದರೆ, ಈ ಸಾಂಪ್ರದಾಯಿಕ ಚಿತ್ರಕಲೆ ರೇಖೆಗಳಿಂದ ಪ್ರಾರಂಭವಾಗಿ ರೇಖೆಗಳಿಂದಲೇ ಪೂರ್ಣಗೊಳ್ಳುವುದು.

**ಆಧಾರ ಗ್ರಂಥಗಳು**


1. ಬಾಯರಿ, ಬಿ.ಪಿ. 1972. ಭಾರತೀಯಕಲೆ. ಧಾರವಾಡ: ಪ್ರತಿಭಾ ಗ್ರಂಥಮಾಲೆ.ಪುಟ–2
2. ತಿಪ್ಪೇಸ್ವಾಮಿ,ಪಿ.ಆರ್. 1993. ಪ್ರಧಾನ ಸಂಪಾದಕರು, ಚಿತ್ರಕಲಾ ಪ್ರಪಂಚ. ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿ.ಪುಟ–5
3. ಕೃಷ್ಣಸೆಟ್ಟಿ, ಜಿ.ಸು. 2010. ಕರ್ನಾಟಕ ಕಲಾದರ್ಶನ–ಸಂಪುಟ–ಒಂದು: ರೇಖಾ ಚಿತ್ರಕಲೆ.ಪ್ರೊ. ಎಂ.ಎಚ್.ಕೃಷ್ಣಯ್ಯ, ಡಾ. ವಿಜಯಾ, ಶ್ರೀ ಜಿ.ಆರ್. ಕೃಷ್ಣರಾವ್. (ಸಂ)ಬೆಂಗಳೂರು: ನವಕರ್ನಾಟಕ ಪಬ್ಲಿಕೇಶನ್, ಪ್ರೈವೇಟ್ ಲಿಮಿಟೆಡ್.ಪುಟ–82
4. ನರಸಿಂಹನ್, ಅ.ಲ. 2008. ಕಲೆ ಮತ್ತು ರಸಸ್ವಾದನೆ. ಚಿತ್ರಕಲೆಯ ಪರಿಭಾಷೆ ಮತ್ತು ಸಾಮಗ್ರಿಗಳು.ಎಂ.ಎಚ್. ಕೃಷ್ಣಯ್ಯ.(ಸಂ)ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿ.ಪುಟ–6–7
5. ಬಾಯರಿ, ಬಿ.ಪಿ. 1972. ಭಾರತೀಯಕಲೆ. ಧಾರವಾಡ: ಪ್ರತಿಭಾ ಗ್ರಂಥಮಾಲೆ.ಪುಟ–7–8–9
6. ನರಸಿಂಹನ್, ಅ.ಲ. 2008 ರೇಖಾಚಿತ್ರ. ರೇಖಾ ಹಾಗೂ ರೇಖಾ ಚಿತ್ರಗಳ ಚಾರಿತ್ರಿಕ ಹಿನ್ನೆಲೆ. ಬಿ.ವಿ.ಕೆ ಶಾಸ್ತ್ರಿ, (ಸಂ) ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿ.ಪುಟ–124
7. ಬಾಯರಿ, ಬಿ.ಪಿ. 1972. ಭಾರತೀಯಕಲೆ. ಧಾರವಾಡ: ಪ್ರತಿಭಾ ಗ್ರಂಥಮಾಲೆ.ಪುಟ–44
8. ಅದೆ. ಪುಟ–47
9. ಅದೆ. ಪುಟ–49
10. ಅದೆ. ಪುಟ–50
11. ನರಸಿಂಹನ್, ಅ.ಲ. 2008. ಕಲೆ ಮತ್ತು ರಸಸ್ವಾದನೆ. ಚಿತ್ರಕಲೆಯ ಪರಿಭಾಷೆ ಮತ್ತು ಸಾಮಗ್ರಿಗಳು.ಎಂ.ಎಚ್. ಕೃಷ್ಣಯ್ಯ.(ಸಂ)ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿ ಪುಟ–131–132
12. ಅದೆ. ಪುಟ–59
13. ಕಾರಂತ, ಶಿವರಾಂ. 1978. ಕಲಾಪ್ರಪಂಚ. ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.ಪುಟ–107
14. ಭಟ್, ಎಚ್.ಆರ್.ರಘುನಾಥ್ ಹಂಪಿ ಸಂಪುಟ: ರೇಖಾಚಿತ್ರಕಲೆ. **ಪುಟ**–96
15. ಮಲ್ಯ,ಮಾಲಿನಿ ಬಿ. 2007. ಸಂಪಾದಕಿ.ಶಿವರಾಂ ಕಾರಂತರ ಸಾಹಿತ್ಯ ಶ್ರೇಣಿ–ಸಂಪುಟ 29–ಕಲಾ ಪ್ರಬಂಧಗಳು–1. ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,ಪುಟ–439
16. ಬಾಯರಿ, ಬಿ.ಪಿ. 1972. ಭಾರತೀಯಕಲೆ. ಧಾರವಾಡ: ಪ್ರತಿಭಾ ಗ್ರಂಥಮಾಲೆ.ಪುಟ–51
17. ಕಾಳೆ, ವಿ.ಟಿ. 2007. ಚಿತ್ರಕಲಾ ದರ್ಪಣ. ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿ.ಪುಟ– 50–51
18. ಬಾಯರಿ,ಬಿ.ಪಿ.1972. ಭಾರತೀಯಕಲೆ. ಧಾರವಾಡ: ಪ್ರತಿಭಾ ಗ್ರಂಥಮಾಲೆ.ಪುಟ–66
19. ಅದೆ. ಪುಟ–70
20. ಅದೆ. ಪುಟ–73
21. ನಂಜುಂಡರಾವ್,ಎಂ.ಎಸ್.1993. ಚಿತ್ರಕಲಾ ಪ್ರಪಂಚ.ಮೈಸೂರು ಸಂಪ್ರಾದಾಯಿಕ ಚಿತ್ರಕಲೆ. ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿ. ಪುಟ–298
22. ಬಾಯರಿ, ಬಿ.ಪಿ. 1972. ಭಾರತೀಯಕಲೆ. ಧಾರವಾಡ: ಪ್ರತಿಭಾ ಗ್ರಂಥಮಾಲೆ.ಪುಟ–81
23. ಟ್ರೆಡಿಶನಲ್ ಪೇಂಟಿಂಗ್ಸ್ ಆಫ್ ಕರ್ನಾಟಕ.1980. ಕರ್ನಾಟಕ ಚಿತ್ರಕಲಾ ಪರಿಶತ್ ಬೆಂಗಳೂರು.ಪುಟ–71